ಅಧ್ಯಕ್ಷರು :– Please ಜೀವರಾಜ್‌ರವರೇ ಕುಳಿತುಕೊಳ್ಳಿ ಅವರು ಮಾತನಾಡಿ ಮುಗಿಸಲಿ.

ಶ್ರೀ ಡಿ.ಎನ್. ಜೀವರಾಜ್ :– ನಾನು ಬಹಳ ಒಳ್ಳೆಯ ಪದಗಳನ್ನು ಹೇಳಿದೆ. ನಾನೇನು ತಪ್ಪು ಹೇಳಿದೆ ಹೇಳಿ.

ಶ್ರೀ ಸಿದ್ಧರಾಮಯ್ಯ :– ಮಲೆನಾಡಿನವರು ಜಗಳ ಮಾಡುವುದಿಲ್ಲ ಬಹಳ ಸೌಮ್ಯವಾದಿಗಳು ಅಂದುಕೊಂಡಿದ್ದೆವು. ಇದೇನು ಈಗ ಈ ತರಹ ಪ್ರಾರಂಭ ಮಾಡಿಕೊಂಡಿದ್ದೀರಿ.

ಅಧ್ಯಕ್ಷರು :– ಅವರು ಮಾತು ಮುಗಿಸಲಿ. ನೀವು ಮಧ್ಯ ಹೀಗೆ ಎದ್ದರೆ ಹೇಗೆ ?

ಶ್ರೀ ಸಿದ್ದರಾಮಯ್ಯ :– ಅಡಿಕೆ ದಾಳಿಂಬೆ, ತೊಗರಿ, ಭತ್ತ, ಈರುಳ್ಳಿ, ಅರಿಶಿಣ ಎಲ್ಲಾ ಹೇಳೋಣ. ಇದರ ಬಗ್ಗೆ ಡಿಬೇಟ್ ಏನು ಬೇಕಾಗುವುದಿಲ್ಲ. ಚಿಕ್ಕಮಗಳೂರು ಮತ್ತು ಉಡುಪಿ ಆ ಭಾಗದ ಜನ ನಮಗೆ ಆಶೀರ್ವಾದ ಮಾಡಿದ್ದಾರೆ. ನಮಗೆ ಅಲ್ಲಿ ಆಶೀರ್ವಾದ ಮಾಡಿರುವಾಗ ಜನಗಳ ಋಣ ತೀರಿಸಬೇಕಾಗುತ್ತದೆ. ಇವರು ಯಾವಾಗ ಕರೆದರೂ ನಾವು ಹೋಗುವುದಕ್ಕೆ ತಯಾರಾಗಿದ್ದೇವೆ. ಇವರು ಕರೆಯದೆ ಇದ್ದರೂ ಹೋಗುತ್ತೇವೆ, ಕರೆದರೂ ಹೋಗುತ್ತೇವೆ. ನಮ್ಮ ಕೆಲಸ ನಮ್ಮ ಕರ್ತವ್ಯ ನಾವು ಮಾಡುತ್ತೇವೆ. ಅದರ ಬಗ್ಗೆ ಮಾನ್ಯ ಜೀವರಾಜ್ ಸಂಶಯ ಪಡಬೇಕಾಗಿಲ್ಲ. ಈಗ ನಿಮ್ಮ ಆವನತಿ ಪ್ರಾರಂಭವಾಯಿತು. ಆದ್ದರಿಂದ ಹೆಚ್ಚಾಗಿ ಮಾತನಾಡುವುದಕ್ಕೆ ಹೋಗಬೇಡಿ.

ಅಧ್ಯಕ್ಷರು :– ಸೈಯದ್ ಯಾಸೀನ್‌ರವರು ಇಲ್ಲ. ಮಹದೇವ ಪ್ರಸಾದ್‌ರವರು, ಖಾದರ್‌ರವರು ಕುಳಿತುಕೊಳ್ಳಿ.

3. ವಿಷಯ : ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಕೆಲಸಕಾರ್ಯಗಳಲ್ಲಿ ಅಧ್ಯಕ್ಷರಿಗೆ ಯಾವುದೇ ಅಧಿಕಾರ ಇಲ್ಲದಿರುವ ಬಗ್ಗೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಗುಂಡ್ಲುಪೇಟೆ) :– ಮಾನ್ಯ ಅಧ್ಯಕ್ಷರೆ, ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸಿರುವಂತಹ ವಿಚಾರ ಶಾಸಕರ ಹಕ್ಕು ಚ್ಯುತಿಗೆ ಸಂಬಂಧಪಟ್ಟ ವಿಚಾರವಾಗಿದೆ. ಇತ್ತೀಚೆಗೆ 2010–11, 2011–12ನೇ ಸಾಲಿನಲ್ಲಿ ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಆಶ್ರಯದಲ್ಲಿ ಒಂದು ಕಂಪನಿ act ನಲ್ಲಿ ಆ ಒಂದು ನಿಗಮ ಕೆಲಸ ನಿರ್ವಹಿಸುತ್ತಿದೆ. ಅದರಲ್ಲಿ ಪ್ರತಿಯೊಂದು ಅಧಿಕಾರ MD ಗೆ ಇದೆಯೇ ಹೊರತು ಅಧ್ಯಕ್ಷರಿಗೆ ಯಾವುದೇ ರೀತಿಯ ಅಧಿಕಾರ MOU ದಲ್ಲಾಗಲಿ,

ಬೈಲಾದಲ್ಲಾಗಲಿ ಇಲ್ಲ. ಆದರೆ ನಮ್ಮ ನಿಗಮ ಏನು ಕೆಲಸ ಮಾಡುತ್ತಿದೆ ಎಂದರೆ, ಗಂಗಾ ಕಲ್ಯಾಣಕ್ಕೆ 5,000 ಗುರಿಗಳನ್ನು ನಿಗದಿಪಡಿಸುತ್ತಾರೆ. ಅದರಲ್ಲಿ ಶೇ. 20% ಅಧ್ಯಕ್ಷರ ವಿವೇಚನಾ ಕೋಟಾ ಎಂದು ಬೋರ್ಡಿನಲ್ಲಿ ಒಂದು ನಿರ್ಣಯ ಮಾಡಿಕೊಂಡು ರಾಜ್ಯಾದ್ಯಂತ 5000 ದಲ್ಲಿ 4000 ಮನೆಗಳನ್ನು 224 ವಿಧಾನಸಭಾ ಕ್ಷೇತ್ರಗಳಿಗೆ ವಿತರಣೆ ಮಾಡುತ್ತಾರೆ. ಅದನ್ನು ಯಾವ ರೀತಿ ಮಾಡುತ್ತಾರೆ. ಪರಿಶಿಷ್ಟ ಜಾತಿಯ ಜನಸಂಖ್ಯೆಗೆ ಅನುಗುಣವಾಗಿ ಆ ನಿಗದಿಯನ್ನು ಗುರಿಪಡಿಸುತ್ತಾರೆ. ಆದರೆ ಒಂದು ಸಾವಿರ ನಿಗದಿಯನ್ನು ಅಧ್ಯಕ್ಷರ ಕೋಟಾ 5000 ದಲ್ಲಿ ಒಂದು ಸಾವಿರ nominated ಅಧ್ಯಕ್ಷ ತನ್ನ ಕೋಟಾ ಎಂದು ಇಟ್ಟುಕೊಂಡು ಅದನ್ನು ಮನಸೋ ಇಚ್ಛೆ ರಾಜಕೀಯ ಪ್ರೇರಿತವಾಗಿ ಯಾವುದೇ ಗೊತ್ತು ಗುರಿ ಇಲ್ಲದೆ ವಿತರಣೆ ಮಾಡತಕ್ಕಂತಹ ಒಂದು ಪ್ರಕರಣ ನಡೆಯುತ್ತಿದೆ. ಅದರಲ್ಲಿಯೂ ವಿಶೇಷವಾಗಿ ಒಂದು ಸಾವಿರದಲ್ಲಿ 500 ನ್ನು ಚಾಮರಾಜನಗರ ಜಿಲ್ಲೆಗೆ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 125 ರಂತೆ ಹಂಚಿಕೆ ಮಾಡಿದ್ದಾರೆ.

ಅಧ್ಯಕ್ಷರು :– ಇದು ಶೂನ್ಯ ವೇಳೆ, ನೀವೂ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿ, ಆದರೆ, details ಹೇಳುವುದಕ್ಕಾಗುವುದಿಲ್ಲ. ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಕೊಡುತ್ತೇನೆ. ನೀವು ಶೂನ್ಯ ವೇಳೆಯಲ್ಲಿ ಈ ರೀತಿ ಎಲ್ಲಾ ವಿವರಗಳನ್ನು ಹೇಳುವುದಕ್ಕೆ ಅವಕಾಶವಿಲ್ಲ. ನೀವು ಬಹಳ ಸ್ಪಷ್ಟವಾಗಿ ಹೇಳಿದ್ದೀರಿ. ಅವರು ಉತ್ತರ ಹೇಳಲಿ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ :– ಮಾನ್ಯ ಅಧ್ಯಕ್ಷರೆ, ಇದು ನನ್ನ ಒಬ್ಬನ ಪ್ರಶ್ನೆ ಅಲ್ಲ.

ಅಧ್ಯಕ್ಷರು :– ನಿಯಾಮವಳಿ ಏನಿದೆ ಅದನ್ನು ನಾನು ಹೇಳಿದ್ದೇನೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ :– ಇದು ನನ್ನ ಒಬ್ಬನ ಪ್ರಶ್ನೆ ಅಲ್ಲ. ನಮ್ಮ ಜಿಲ್ಲೆಯವರು ನಾಲ್ಕು ಜನ ಇದ್ದಾರೆ. ನಂಜುಂಡಸ್ವಾಮಿಯವರು ಅದಿಯಾಗಿ.

ಅಧ್ಯಕ್ಷರು :– ನಾನು ಚರ್ಚೆ ಮಾಡಬೇಡಿ ಎಂದು ಹೇಳಲಿಲ್ಲ. ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ :– 25 ರಿಂದ 30 ಎಂದು ನಮ್ಮ ಕೋಟಾ ನಿಗದಿಪಡಿಸಿದ್ದಾರೆ. ಫಲಾನುಭವಿಗಳ ಅರ್ಜಿಗಳನ್ನು ಕಾರ್ಪೊರೇಷನ್‌ನವರು ಸ್ಥಳೀಯವಾಗಿ ತೆಗೆದುಕೊಳ್ಳುತ್ತಾರೆ. ಬಂದ ಅರ್ಜಿಗಳಲ್ಲಿ ಅರ್ಹತೆ ಇರುವವರನ್ನು ನಾವು ಆಯ್ಕೆ ಮಾಡುತ್ತೇವೆ. ಇದಕ್ಕೆ ಯಾವ

ಪ್ರೊಸೀಜರೂ ಇಲ್ಲ. ಇವರಿಗೆ ಯಾರೋ ಕಾರ್ಯಕರ್ತರು ಕೊಟ್ಟ ಹೆಸರುಗಳನ್ನು ಮಂಜೂರು ಮಾಡಿದೆ ಎಂದು ಕೊಡುವುದು ಹೋಗಿ ಬೋರ್‌ವೆಲ್ ಕೊರೆಯುವಂತೆ ಹೇಳುವುದು. ಯಾವ formalities ಇಲ್ಲಿ ಇಲ್ಲ. ನಮ್ಮ ಸಮಿತಿಯವರು ಆಯ್ಕೆ ಮಾಡಿರುವುದಕ್ಕೆ ಇನ್ನೂ ಏಜೆನ್ಸಿ ಫಿಕ್ಸ್ ಆಗಿಲ್ಲ, ಬೋರ್‌ವೆಲ್‌ಗಳನ್ನು ಕೊರೆಯುತ್ತಿಲ್ಲ. 125 ರಲ್ಲಿ 100, 110 ಒಂದೊಂದು ಕ್ಷೇತ್ರದಲ್ಲಿ ನಮ್ಮ ಗಮನಕ್ಕೆ ಬಾರದ ಹಾಗೆ ಇವತ್ತು ಸರ್ಕಾರ ಸಮಾಜ ಕಲ್ಯಾಣ ಇಲಾಖೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದೆ. ತಮಗೂ ಗೊತ್ತಿದೆ. ಶಾಸಕರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ membership ನಲ್ಲಿ ಒಂದು ಸಮಿತಿ ಇದೆ. ಇದರಲ್ಲಿ ಗಂಗಾ ಕಲ್ಯಾಣ ಯೋಜನೆ ಆಡಿ ಫಲಾನುಭವಿಗಳನ್ನು ಆಯ್ಕೆ ಮಾಡುವುದು, ಈ ಕಾರ್ಯಕ್ರಮಗಳು ಯಶಸ್ವಿಯಾಗಿ ಕಾರ್ಯಗತವಾಗಲು ಸಲಹೆ ನೀಡುವುದು, ಯೋಜನೆಗಳಲ್ಲಿ ಲೋಪದೋಷಗಳಿದ್ದರೆ ಅಂತಹವುಗಳನ್ನು ನಿವಾರಿಸಲು ಸಲಹೆ ನೀಡುವುದು ಎಂದು ಇದೆ. ಇದು ಸರ್ಕಾರದ ಒಂದು ಸುತ್ತೋಲೆ. ಈ ಸುತ್ತೋಲೆ ಎಲ್ಲವನ್ನೂ ಗಾಳಿಗೆ ತೂರಿ. ಅಲ್ಲಿಯ MD, ಅಧ್ಯಕ್ಷರು ಮತ್ತು ಸ್ಥಳೀಯ ಅಧಿಕಾರಿಗಳು ಶಾಸಕರನ್ನೆಲ್ಲಾ ಕತ್ತಲಿನಲ್ಲಿಟ್ಟು ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುತ್ತಿದ್ದಾರೆ. ಇದರಿಂದ ನಮ್ಮ ಶಾಸಕರುಗಳಿಗೆ ನಮ್ಮ ಕೆಲಸಕಾರ್ಯಗಳಿಗೆ ಹಕ್ಕುಚ್ಯುತಿ ಆಗಿದೆ. ಸರ್ಕಾರವೇ ರಚಿಸಿರುವಂತಹ ಸಮಿತಿಗೆ ಮೂರು ಕಾಸಿನ ಬೆಲೆ ಇಲ್ಲದ ಹಾಗಾಗಿದೆ. ಎಲ್ಲಾ ಬೋರ್ಡ್ ಕಾರ್ಪೊರೇಷನ್‌ಗಳಲ್ಲಿ 5% discretionary ಕೋಟ ಇದೆ. ನಾನು 17 ವರ್ಷಗಳಿಂದ ಶಾಸನಸಭೆಯಲ್ಲಿದ್ದೇನೆ. ಎಲ್ಲಿಯೂ 20% ಮಾಡಿಕೊಂಡಿರುವ ನಿದರ್ಶನ ನಾವು ಇದುವರೆಗೂ ನೋಡಿಲ್ಲ. 20% ಬೋರ್ಡಿನಲ್ಲಿ ಮಾಡಿಕೊಂಡರೂ ಸರ್ಕಾರದ ಒಪ್ಪಿಗೆ ಬೇಕಾಗುತ್ತದೆ. ಒಪ್ಪಿಗೆ ತೆಗೆದುಕೊಂಡಿದ್ದಾರೋ ಇಲ್ಲವೋ ಒಂದು ಗೊತ್ತಿಲ್ಲ. ಮನಸ್ಸೋ ಇಚ್ಛೆ ಆ ಕಾರ್ಪೊರೇಷನ್‌ದಲ್ಲಿ ಕೆಲಸ ನಡೆಯುತ್ತಿದೆ. ಇದಕ್ಕೆ ಕೂಡಲೇ ತಡೆ ಒಡ್ಡಬೇಕು. ಶಾಸಕರಿಗೆ ಆಗಿರುವ ಹಕ್ಕುಚ್ಯುತಿಯ ಬಗ್ಗೆ ಗಮನಹರಿಸಬೇಕು. ಮುಂದೆ ಈ ರೀತಿ ಆಗದಂತೆ ಕ್ರಮ ಕೈಗೊಳ್ಳಬೇಕು ಎನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದೇ ಕಾರಣಕ್ಕಾಗಿ ಮಾನ್ಯ ಪುಟ್ಟರಂಗಶೆಟ್ಟಿಯವರು ಹಕ್ಕುಚ್ಯುತಿಯಾಗಿದೆ ಎಂದು ಹೇಳಿ ತಮಗೆ ಒಂದು ಪತ್ರವನ್ನು ಕೊಟ್ಟಿದ್ದಾರೆ. ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಬೇಕೆಂದು ನಿನ್ನೆ ಮೊನ್ನೆಯೂ ಕೂಡ ಚರ್ಚೆಯಾಗಿದೆ. ಆ ನಿಗಮದ ಅಧ್ಯಕ್ಷರು ಶಾಸಕರನ್ನು ಫೋನಿನಲ್ಲಿ ಕರೆದು 100 ಜನ ಫಲಾನುಭವಿಗಳಿಗೆ ಬೆನಿಫಿಟ್ ಕೊಡುತ್ತೇವೆ ಬನ್ನಿ ಎಂದು ಕರೆಯುತ್ತಾರೆ. ಈ ರೀತಿಯಲ್ಲಿ ಸರ್ಕಾರ ಬೋರ್ಡ್ ಮತ್ತು

ಕಾರ್ಪೊರೇಷನ್‌ಗಳಿಗೆ ನಾಮಿನೇಟ್ ಆಗಿರುವವರಿಗೆ ಇಷ್ಟು ಅಧಿಕಾರ ಕೊಟ್ಟು ಬಿಟ್ಟರೆ ಚುನಾಯಿತರಾದವರ ಕತೆ ಏನು ಆಗಬೇಕು ? ಇದಕ್ಕೆ ತಾವು ರಕ್ಷಣೆಗೆ ಬರಬೇಕು. ನಮ್ಮನ್ನು ರಕ್ಷಣೆ ಮಾಡಬೇಕು. ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಮಾನ್ಯ ಸಚಿವರು ಪರವಾಗಿಲ್ಲ ಅವರು ನಮ್ಮ ಜೊತೆಯಲ್ಲಿ ಎಲ್ಲಾ ರೀತಿಯಿಂದ ಸಹಕರಿಸುತ್ತಾರೆ. ಆದರೆ ಆ ನಿಗಮದ ಅಧ್ಯಕ್ಷರಿಗೆ ಏಕೆ ಈ ಬುದ್ಧಿ ಬಂತು ನನಗೆ ಗೊತ್ತಾಗಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಅಧ್ಯಕ್ಷರು : ಸಚಿವರು ಉತ್ತರ ಹೇಳಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ :– ಎಲ್ಲಾ ಶಾಸಕರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ಮಾಡಿದ್ದೀರಿ.

ಅಧ್ಯಕ್ಷರು :– ಶೂನ್ಯವೇಳೆಯಲ್ಲಿ ಚರ್ಚೆಗೆ ನಿಮ್ಮ ಹೆಸರು ಇರುವುದಿಲ್ಲ. ನೀವು ಹಾಗೆ ಎದ್ದು ನಿಂತುಕೊಂಡರೆ ಆಗುವುದಿಲ್ಲ. ಪ್ಲೀಸ್, ಉತ್ತರವನ್ನು ಹೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ :– ಅದು ಏನಾಗುತ್ತದೆಂದು ಹೇಳುತ್ತೇವೆ. ನಮ್ಮ ಕ್ಷೇತ್ರದಲ್ಲಿ ಕೂಡ ಅಧ್ಯಕ್ಷರ ವಿವೇಚನೆಯ ಕೋಟಾ ಎಂದು ಹಾಕಿಸಿಕೊಂಡು ಬಂದು 10 ಸಾವಿರ ರೂ.ಗಳಿಗೆ ಮಾರುತ್ತಿದ್ದಾರೆ. ಶಾಸಕರಿಗೆ ಪುಕ್ಕಟೆ ಕೊಡುತ್ತೇವೆಂದು ಹೇಳುವುದು. ಅವರ ಕಡೆಯಿಂದ 10 ಸಾವಿರ ರೂ.ಗಳೆಂದು ಹೇಳಿ ಕೆಲವರು ಮಾರುತ್ತಿದ್ದಾರೆ. ಆದ್ದರಿಂದ ದಯವಿಟ್ಟು ಯಾರಾದರೂ ಕೋಟಾ ಕೊಡಿ ಶಾಸಕರ ಸಮಿತಿಯ ಮುಂದೆ ಆಯ್ಕೆ ಆಗಬೇಕೇಂದಾದರೂ ಮಾಡಿ. ಕೊನೆ ಪಕ್ಷ ಅವರು ನಮ್ಮ ಮುಂದೆ ಬರುತ್ತಾರೆ. ಅವರಿಂದ ದುಡ್ಡು ತೆಗೆದುಕೊಳ್ಳುವುದು ಗೊತ್ತಾಗುತ್ತದೆ. ನಮಗೇನು ಹೊಟ್ಟೆ ಊರಿ ಇಲ್ಲ. ಅಲ್ಲಿ ದಲಿತರೇ ದಲಿತರಿಂದ ದುಡ್ಡು ತಿನ್ನುವುದಾಗುತ್ತಿದೆ.

ಶ್ರೀ ವೆಂಕಟರಾವ್ ನಾಡಗೌಡ :– ಎಲ್ಲಾ ಕ್ಷೇತ್ರದಲ್ಲಿ ಇದೇ ರೀತಿ ಆಗುತ್ತಿದೆ.

ಅಧ್ಯಕ್ಷರು :– ಅವರಿಗೆ ಉತ್ತರವನ್ನು ಹೇಳುವುದಕ್ಕೆ ಬಿಡಿ. ನಿಮಗೆ ಉತ್ತರ ಬೇಡವೆಂದರೆ ಮುಂದಿನ ಚರ್ಚೆಗೆ ಕರೆಯುತ್ತೇನೆ. ನೀವು ಉತ್ತರವನ್ನು ಹೇಳುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ ?

ಶ್ರೀ ಕೆ.ಎಂ. ಶಿವಲಿಂಗೇಗೌಡ :– ತಾವು ಸ್ವಲ್ಪ ಸಮಾಧಾನದಿಂದ ಹೇಳಬೇಕು.

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಸಚಿವರು) :– ಮಾನ್ಯ ಅಧ್ಯಕ್ಷರೆ, ಡಾ॥ ಬಿ.ಆರ್. ಅಂಬೇಡ್ಕರ್ ನಿಗಮದ ಅಧ್ಯಕ್ಷರಾಗಿ ಆ ಬೋರ್ಡಿನಲ್ಲಿ ತೀರ್ಮಾನ ಮಾಡಿ ಅಧ್ಯಕ್ಷರಾಗಿ ಹಲವಾರು ಕಡೆ ಪ್ರವಾಸ ಮಾಡಿದಾಗ ಅನೇಕರು ಹಾಗೂ ಸಮಾಜದ ಬಂಧುಗಳು ಅರ್ಜಿಗಳನ್ನು ಕೊಟ್ಟಿರುತ್ತಾರೆ.

ಕೆಲವು ಶಾಸಕರಿಂದ ಪಟ್ಟಿ ಬರದಿದ್ದಾಗ ಹಣ ಇದ್ದಾಗ ಆ ಯೋಜನೆ ಫಲಕಾರಿ ಆಗಬೇಕು ಮತ್ತು ಸಮಾಜಕ್ಕೆ ಒಳ್ಳೆಯದು ಆಗಬೇಕೆಂದು ಹೇಳಿ ಆ ನಿಟ್ಟಿನಲ್ಲಿ ಅಧ್ಯಕ್ಷರು ಬೋರ್ಡ್ ಮುಂದೆ ಇಟ್ಟು ಆ ಬೋರ್ಡಿನ ವಿವೇಚನಾ ಕೋಟಾದ ಅಡಿಯಲ್ಲಿ ಅನುಮತಿಯನ್ನು ಪಡೆದಿದ್ದಾರೆ. ಅಧ್ಯಕ್ಷರು ಬೋರ್ಡಿನ ಅನುಮತಿಯನ್ನು ಪಡೆದಾಗ ಅದು ಇಡೀ ರಾಜ್ಯಕ್ಕೆ ಹಂಚಬೇಕು. ಒಂದೇ ಜಿಲ್ಲೆಗೆ ಹಂಚಿದ್ದಾರೆ. ಅದಕ್ಕಾಗಿ ಅದು ತಪ್ಪಾಗಿದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಒಬ್ಬರು ಅಧ್ಯಕ್ಷರಾಗಿ ಇಡೀ ರಾಜ್ಯಕ್ಕೆ ಹಂಚಬೇಕು. ಹಂಚುವ ಕಾರ್ಯ ಮಾಡುವುದಕ್ಕೆ ನಾನು ಅವರಿಗೆ ಸೂಚನೆಯನ್ನು ನೀಡುತ್ತೇನೆ. ವಿಶೇಷವಾಗಿ ಇಡೀ ರಾಜ್ಯದಲ್ಲಿ ಎಲ್ಲಾ ಶಾಸಕರಿಗೆ ಹಂಚಿಕೆ ಆಗಬೇಕು. ಕೆಲವು ಫಲಾನುಭವಿಗಳಿಗೆ 25–30 ಕೊಟ್ಟಿರುತ್ತಾರೆ ಈ ವಿಚಾರದಲ್ಲಿ ಮಂತ್ರಿಯಾಗಿ ಒಬ್ಬ ನಿಗಮದ ಅಧ್ಯಕ್ಷರಿಗೆ ಹೇಳುತ್ತೇನೆ. ರಾಜ್ಯದ ಜನರಿಗೆ ಸ್ಪಂದನ ಮಾಡಿ ವಿವೇಚನಾ ಕೋಟಾದಡಿಯಲ್ಲಿ ಬಡವರಿಗೆ ಅಧ್ಯಕ್ಷರು ಮಾಡಿರುತ್ತಾರೆ. ಹಾಗೂ ನಿಗಮದ ಅಧಿಕಾರಿಗಳಿಗೆ ವಿವೇಚನಾ ಕೋಟಾದಡಿಯಲ್ಲಿ ಇಡೀ ರಾಜ್ಯದ ಎಲ್ಲಾ ಕ್ಷೇತ್ರಗಳಿಗೆ ಹೋಗಬೇಕೆಂದು ಸೂಚನೆಯನ್ನು ಕೊಡುತ್ತೇನೆ. ಶಾಸಕರಿಗೆ ನಿಗದಿ ಮಾಡಿರುವ ಫಲಾನುಭವಿಗಳ ಪಟ್ಟಿಯಲ್ಲಿ ಎಲ್ಲೂ ಕಡಿಮೆ ಮಾಡಿಲ್ಲ. ಇನ್ನು ಹೆಚ್ಚು ಮಾಡಿದ್ದೇವೆ. ಅನೇಕರು ಅವರ ಹಿಂಬಾಲಕರಿಗೆ ಕೊಡುತ್ತಿದ್ದಾರೆ. ಇಡೀ ರಾಜ್ಯದಲ್ಲಿ ಯಾರಿಗೆ ಅವಶ್ಯಕತೆ ಇದೆ ಎಂಬ ಬಗ್ಗೆ ಮೊದಲು ಪಟ್ಟಿ ಆಗಬೇಕು ಬಡವ, ರೈತ ನನಗೆ ಗಂಗಾ ಕಲ್ಯಾಣ ಬೇಕು, ಹೈನುಗಾರಿಕೆ ಬೇಕು ಇದರ ಪಟ್ಟಿ ಆಗಲೇ ಬೇಕಾಗಿದೆ. ಎಲ್ಲಿ ಹೆಚ್ಚು ಕಡಿಮೆ ಮಾಡಿರುತ್ತಾರೆ ಎಲ್ಲಿ ಯಾರಿಗೆ ಅವಶ್ಯಕತೆ ಇದೆ ಅವರಿಗೆ ಕೊಡುವುದಕ್ಕೆ ಹೇಳುತ್ತೇನೆ. ಇವತ್ತು 5 ವರ್ಷದ ಒಂದು ಪ್ಲಾನ್ ಹಾಕಿಕೊಂಡು ಮಾಡುವುದಕ್ಕೆ ಯೋಜನೆ ಮಾಡುತ್ತಿದ್ದೇವೆ. ಅಂಬೇಡ್ಕರ್ ಅಭಿವೃದ್ಧಿ ನಿಗಮ ಇರಬಹುದು. ಎಸ್‌ಸಿ/ಎಸ್‌ಟಿ ನಿಗಮ ಇರಬಹುದು, ಹಿಂದುಳಿದ ವರ್ಗದ ಅಭಿವೃದ್ಧಿ ನಿಗಮ ಇರಬಹುದು ಆ ನಿಗಮದಲ್ಲಿ ನಿಜವಾದ ಕಡುಬಡವರು ಯಾರು ಇರುತ್ತಾರೆ. ಅವರ ಒಂದು ಪಟ್ಟಿ ಮಾಡಿ ಕೊಡುವುದಕ್ಕೆ ಒಂದು ಸ್ಕೀಂ ಮಾಡುತ್ತಿದ್ದೇವೆ. ನಂತರ ವೆಬ್‌ಸೈಟ್ ಮೂಲಕ ಎಲ್ಲಾ ಶಾಸಕರಿಗೆ ಕಳುಹಿಸಿ ಕೊಡುತ್ತೇವೆ. ಇದನ್ನು ಮಾಡುವುದಕ್ಕೆ ನಿಗಮದಿಂದ ಯೋಚನೆ ಮಾಡುತ್ತಿದ್ದೇವೆ. ಇದರಲ್ಲಿ ತಾವು ಹೇಳಿದಂತೆ ಅನ್ಯಾಯವಾಗಿದ್ದರೆ ಈ ಕೂಡಲೇ ಅದನ್ನು ಸರಿಪಡಿಸಿ ತಪ್ಪಾಗಿದ್ದರೆ ಕ್ರಮ ಜರುಗಿಸುತ್ತೇನೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ :– ಶಾಸಕರ ನೇತೃತ್ವದಲ್ಲಿ ಆಯ್ಕೆ ಸಮಿತಿ ಮಾಡಿದ್ದೀರಿ. ಅವರ ಗಮನಕ್ಕೆ ಬರದೆ ಮಾಡುತ್ತಿದ್ದಾರೆ. ಆಯ್ಕೆ ಸಮಿತಿ

ಆಯ್ಕೆ ಮಾಡಿರುವುದು 25 ಬೋರ್‌ವೆಲ್‌ಗಳನ್ನು, ಆದರೆ ನಿಗಮದ ಅಧ್ಯಕ್ಷರ ವಿವೇಚನಾ ಕೋಟಾದಲ್ಲಿ 125 ಬೋರ್‌ವೆಲ್‌ಗಳನ್ನು ಕೊಡುತ್ತಾರೆ. ಯಾವ ಆಧಾರದ ಮೇಲೆ ಅರ್ಜಿ ತೆಗೆದುಕೊಂಡು ಇಷ್ಟು ಮಂಜೂರು ಮಾಡುತ್ತಾರೆ.

ಶ್ರೀ ಎ. ನಾರಾಯಣಸ್ವಾಮಿ :– ಸಮಾನವಾಗಿ ಎಲ್ಲಾ ಶಾಸಕರಿಗೆ ಹಂಚಬೇಕೆಂದು ಮಾಡಿರುತ್ತೇವೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :– ಶಾಸಕರ ನೇತೃತ್ವದ ಸಮಿತಿಯ ಗಮನಕ್ಕೆ ಬರದೆ ಬೋರ್‌ವೆಲ್‌ಗಳನ್ನು ಕೊರೆಯತ್ತಾರೆ. ಇದು ಸಮಿತಿಯ ಗಮನಕ್ಕೆ ತರಬೇಕು ಹೀಗಾದರೆ ಚುನಾಯಿತ ಪ್ರತಿನಿಧಿಗಳ ಪರಿಸ್ಥಿತಿ ಏನು ?

ಶ್ರೀ ಸಿದ್ಧರಾಮಯ್ಯ :– ಎಲ್ಲಾ ನಿಗಮದವರು ಅಧ್ಯಕ್ಷರ ವಿವೇಚನಾ ಕೋಟಾ ಎಂದು ಇಟ್ಟುಕೊಂಡಿರುತ್ತಾರೆ. ಅವರು ಯಾರಿಗೆ ಬೇಕು ಅವರಿಗೆ ಕೊಟ್ಟುಕೊಂಡು ಹೋಗಿರುತ್ತಾರೆ. ಈ ವಿವೇಚನಾ ಕೋಟಾದಿಂದ ಬಹಳ ಅನ್ಯಾಯವಾಗುತ್ತಿದೆ. ರಾಜ್ಯದ ಪ್ರಗತಿಗೆ ಹೊಡೆತ ಬೀಳುತ್ತಿದೆ. ಅವರ ಜಿಲ್ಲೆಗೆ 500 ಬೋರ್‌ವೆಲ್‌ಗಳನ್ನು ಕೊಡುತ್ತಾರೆ. ಬೀದರ್ ಜಿಲ್ಲೆಗೆ ಎಷ್ಟು ಕೊಟ್ಟಿದ್ದಾರೆ? ಗುಲ್ಬರ್ಗಾ ಜಿಲ್ಲೆಗೆ ಎಷ್ಟು ಕೊಟ್ಟಿದ್ದಾರೆ ? ರಾಯಚೂರು ಜಿಲ್ಲೆಗೆ ಎಷ್ಟು ಕೊಟ್ಟಿದ್ದಾರೆ ? ಬೇರೆ ಯಾವ ಜಿಲ್ಲೆಗೆ 500 ಬೋರ್‌ವೆಲ್‌ಗಳನ್ನು ಕೊಟ್ಟಿದ್ದೀರಿ ? ಅವರಿಗೆ ಏಕೆ 50% ಕೊಡಬೇಕು? ಅವರು 50% ಇಟ್ಟುಕೊಂಡು ಬೇಕಾದವರಿಗೆ ಕೊಡುತ್ತಾರೆ. ನಾವು ಆ ನಿಗಮಕ್ಕೆ ಬೇಕಾದ ಹಣಕ್ಕೆ ಇಲ್ಲಿ ಅಪ್ರೂವಲ್ ಮಾಡಿಕೊಡುವುದು. ಅವರಿಗೆ ಬೇಕಾದಂತೆ ಕೊಡುವುದಕ್ಕೆ ಅಲ್ಲ. ಇಲ್ಲಿ ಅಪ್ರೂವಲ್ ಮಾಡಿ ಕೊಟ್ಟಿರುವುದು. ಅವರು ಎಲ್ಲಾ ಕ್ಷೇತ್ರಗಳಿಗೆ ಸಮಾನವಾಗಿ ಹಂಚಬೇಕು. ಬಹಳ ಹಿಂದುಳಿದ ತಾಲ್ಲೂಕುಗಳಿಗೆ ಸ್ವಲ್ಪ ಹೆಚ್ಚಿಗೆ ಕೊಡಬೇಕು. ಅದು ಬಿಟ್ಟು ಅವರಿಗೆ ಇಷ್ಟ ಬಂದವರಿಗೆ ಕೊಡವುದಕ್ಕಾಗುವುದಿಲ್ಲ. ನನ್ನ ಕ್ಷೇತ್ರದಲ್ಲಿ ಕಾರಿಯಾ ಎಂದು ಊರು ಇದೆ. ಒಬ್ಬರು ಬಂದು ನಾವು 20 ಬೋರ್‌ವೆಲ್‌ಗಳನ್ನು ಹಾಕಿಸಿಕೊಂಡು ಬಂದಿದ್ದೇವೆ. ನಿಮ್ಮಿಂದ ಕೊಡಿಸುವುದಕ್ಕೆ ಆಗಲಿಲ್ಲವೆಂದು ಹೇಳಿದರು. ಅದು ನನಗೆ ಗೊತ್ತೆ ಇಲ್ಲ. ಇದಕ್ಕೆ ನಾವು ಏನು ಉತ್ತರ ಕೊಡಬೇಕು ನೀವೇ ಹೇಳಿ. ಅದೇ ಪರಿಸ್ಥಿತಿ ಇಲ್ಲಿಯೂ ಆಗಿದೆ. ಸಚಿವರು ಇದಕ್ಕೆ ಉತ್ತರವನ್ನು ಕೊಡಲೇಬೇಕು. ಸಚಿವರು ಸ್ವಲ್ಪ ಸಮಾಧಾನವಾಗಿ ಉತ್ತರವನ್ನು ಕೊಡಿ. ಆದ್ದರಿಂದ ಶಾಸಕರುಗಳಿಗೆ ಇದರಿಂದ ಅವಮಾನ ಆಗುತ್ತದೆ. ಅದಕ್ಕಾಗಿಯೇ ನಾನು ಪದೇ ಪದೇ ಹೇಳುತ್ತಿರುತ್ತೇನೆ. ಅದಕ್ಕಾಗಿ ಯಾರಿಗೂ ಈ ವಿವೇಚನೆ ಕೋಟಾ ಇರಬಾರದು. ಒಂದೊಂದು ಕ್ಷೇತ್ರದಲ್ಲಿ ಇಷ್ಟೊಂದು ಕೊಟ್ಟು ಬಿಡುತ್ತೀರಿ. ಯಾವ ಆಧಾರದ ಮೇಲೆ

ಕೊಡುತ್ತೀರಿ ನನಗೆ ಗೊತ್ತಾಗುತ್ತಿಲ್ಲ. ನಮ್ಮಲ್ಲಿ ರೂಲ್ಸ್ ಆಫ್ ಬಿಸಿನೆಸ್ ಎಂದು ಇದೆ. ಒಂದೊಂದು ಕ್ಷೇತ್ರದಲ್ಲಿ ಹೇಗೆ ಈ ರೀತಿ ಕೊಟ್ಟು ಬಿಡುತ್ತೀರಿ ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :– ಶಾಸಕರಿಗೆ ಗೌರವ ಇಲ್ಲದಂತಾಗಿದೆ.

ಶ್ರೀ ಸಿದ್ದರಾಮಯ್ಯ :– ನಾನು ನಿಮ್ಮ ಪರವಾಗಿಯೇ ಹೇಳುತ್ತಿದ್ದೇನೆ. ತಾವು ಕುಳಿತುಕೊಳ್ಳಿ, ನೀವು ಬಿಜೆಪಿಯಲ್ಲಿ ಏಕೆ ಇರುತ್ತಿರಾ? ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎ. ನಾರಾಯಣಸ್ವಾಮಿ :– ಮಾನ್ಯ ಅಧ್ಯಕ್ಷರೆ ಒಂದು ನಿಮಿಷ ನಾನು ಮಾತನಾಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ :– ಮಂಜೂರಾತಿಯನ್ನು ತಡೆಹಿಡಿಯಬೇಕು.

(ಗೊಂದಲ)

ಶ್ರೀ ಎ. ನಾರಾಯಣಸ್ವಾಮಿ :– ಮಾನ್ಯ ಅಧ್ಯಕ್ಷರೆ ಒಂದು ನಿಮಿಷ ನಾನು ಮಾತನಾಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ :– ಮಂಜೂರಾತಿ ತಡೆಹಿಡಿದು, ತಾವು ಸರ್ಕಾರಕ್ಕೆ ಅಧಿಕಾರ ಇಟ್ಟುಕೊಳ್ಳಿ.

(ಗೊಂದಲ)

ಶ್ರೀ ಬೇಳೂರು ಗೋಪಾಲಕೃಷ್ಣ :– ಅಣ್ಣ ಒಂದು ನಿಮಿಷ, ಈ ರಾಜ್ಯದ ...

(ಗೊಂದಲ)

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :– ನಾನು ಮಾನ್ಯ ಸದಾನಂದಗೌಡರ ಪರವಹಿಸುತ್ತೇನೆ.

(ಗೊಂದಲ)

ಅಧ್ಯಕ್ಷರು :– ಮಾನ್ಯ ಶಂಕರಲಿಂಗೇಗೌಡರೆ, ದಯವಿಟ್ಟು ಕುಳಿತುಕೊಳ್ಳಿ

(ಗೊಂದಲ)

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :– ಅದು ನನ್ನ ಹಕ್ಕು.

(ಗೊಂದಲ)

ಶ್ರೀ ವೈ.ಎನ್. ರುದ್ರೇಶ್‌ಗೌಡ :– ಮಾನ್ಯ ಅಧ್ಯಕ್ಷರೆ, ಅವರು privilege ಮಾಡುತ್ತಿದ್ದಾರೆ. ಒಬ್ಬರಿಗೊಬ್ಬರು ಕಚ್ಚಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು :– ಇದು ಏನು ? ಮಾನ್ಯ ಗೋಪಾಲಕೃಷ್ಣನವರೆ, ಮಾನ್ಯ ಶಂಕರಲಿಂಗೇಗೌಡರೆ, ಕುಳಿತುಕೊಳ್ಳಿ, ನೀವು ನೀವು ಅಲ್ಲಲ್ಲೇ ಏಕೆ ಮಾತನಾಡುತ್ತೀರಿ ?

(ಗೊಂದಲ)

ಶ್ರೀ ವೈ.ಎನ್. ರುದ್ರೇಶ್‌ಗೌಡ :– House ಒಳಗೇ ಕಚ್ಚಾಟ.

(ಗೊಂದಲ)

ಅಧ್ಯಕ್ಷರು :– ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವೈ.ಎನ್. ರುದ್ರೇಶ್‌ಗೌಡ :– House ಹೊರಗಡೆ ಕಚ್ಚಾಟ ಅಲ್ಲ. House ಒಳಗೇ ಕಟ್ಟಾಟ.

(ಗೊಂದಲ)

ಅಧ್ಯಕ್ಷರು :– ಯಾವುದೂ ದಾಖಲೆಗೆ ತೆಗೆದುಕೊಳ್ಳಬೇಡಿ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ನಡವಳಿಯನ್ನು ದಾಖಲು ಮಾಡಿಕೊಂಡಿರುವುದಿಲ್ಲ)

(ಗೊಂದಲ)

ಅಧ್ಯಕ್ಷರು :– ಮಾನ್ಯ ನಾರಾಯಣಸ್ವಾಮಿಯವರೆ, ಮಾತನಾಡಿ.

ಶ್ರೀ ಎ. ನಾರಾಯಣಸ್ವಾಮಿ :– ಮಾನ್ಯ ಅಧ್ಯಕ್ಷರೆ ನಮ್ಮ discretionary quota ಬಗ್ಗೆ ಗಂಭೀರವಾಗಿ ಚರ್ಚೆಯಾಗಿದೆ. ರಾಜ್ಯದಲ್ಲಿ ಈ ರಾಜ್ಯದ ಅಯವ್ಯಯ ಸಮಾನವಾಗಿ ಹಂಚಿಕೆಯಾಗಿದ್ದರೆ ಹೈದರಾಬಾದ್–ಕರ್ನಾಟಕ, ಬಾಂಬೆ–ಕರ್ನಾಟಕ ಇಷ್ಟೊಂದು ಹಿಂದುಳಿಯುತ್ತಿರಲಿಲ್ಲ. ಬೆಂಗಳೂರುಗೆ 80 ಕಿ.ಮೀ. ಇರತಕ್ಕಂಥ ಬಾಗೇಪಲ್ಲಿಯಲ್ಲಿ ಈ ರಾಜ್ಯದ ಯುವಜನತೆಯ ಬಗ್ಗೆ ಗಮನ ಇದೆಯೇ ? ಹೆಣ್ಣು ಮಕ್ಕಳು ಬಾಂಬೆಗೆ ಹೋಗುತ್ತಿದ್ದಾರೆ. ಕಾಡಿನೊಳಗೆ 25 ಕಿ.ಮೀ. ಹಾದಿಗಳಿಲ್ಲದೆ ಇನ್ನೂ ವಾಸ ಮಾಡುತ್ತಿದ್ದಾರೆ. ಇವರ ಬಗ್ಗೆ ಯಾವ ಶಾಸಕರೂ, ಮಂತ್ರಿಗಳೂ ಗಮನ ಕೊಟ್ಟಿಲ್ಲ ಜೊತೆಗೆ ಆದಿವಾಸಿಗಳಿಗೂ ಗಮನ ಕೊಡುತ್ತಿಲ್ಲ. ಮಂತ್ರಿಯಾದ ನಾನು 25–30 ಕಿ.ಮೀ. ಕಾಡಿನ ಆ ಹಾದಿಯೊಳಗೆ ಹೋಗಿದ್ದೇನೆ. ಬಾಗೇಪಲ್ಲಿಯಲ್ಲಿ ಅವರ ಜೀವನದ ಬಗ್ಗೆ ಸಮಗ್ರವಾದ ಚರ್ಚೆ ಆಗಬಾರದು. ಯಾರಿಗೂ ಆ ಹೆಣ್ಣುಮಕ್ಕಳ ಮನಸ್ಥಿತಿ ಅರ್ಥವಾಗುವುದಿಲ್ಲ. ಏಕೆ ಹೋಗುತ್ತಿದ್ದಾರೆ, ಅವರು ಬಾಂಬೆಯಲ್ಲಿ ಯಾವ ಜೀವನ ಸಾಗಿಸುತ್ತಿದ್ದಾರೆ ? ಶಾಸಕರು ಚುನಾಯಿತ ಸದಸ್ಯರು, ಮಂತ್ರಿಗಳು ಗ್ರಾಮೀಣ ಪ್ರದೇಶಗಳಿಗೆ ಹಳ್ಳಿಗಾಡಿನ ಪ್ರದೇಶಗಳಿಗೆ ಹೋಗಿ ನೋಡಬೇಕು. ಆ ಆದಿವಾಸಿಗಳ ಜೀವನ ಪದ್ಧತಿಯನ್ನು ನೋಡಬೇಕು. ಅಧ್ಯಕ್ಷರು ಮಾಡಿದ್ದಾರೋ ನನಗೆ ಗೊತ್ತಿಲ್ಲ. ಅದರೆ ಮಂತ್ರಿಯಾದವರು ಹಳ್ಳಿ ಹಳ್ಳಿಗೆ ಹೋಗಬೇಕು ಅಥವಾ ಇಡೀ ಕ್ಷೇತ್ರ ಪರ್ಯಟನೆ ಮಾಡಬೇಕು. ಸಮಸ್ಯೆಗಳಿಗೆ ನೇರ ಸ್ಪಂದನೆ ಮಾಡಬೇಕು. ಹಾಗೆ ಮಾಡದಿದ್ದರೆ ಮಂತ್ರಿಯಾಗಿ ಏಕೆ ಇರಬೇಕು ?

(ಗೊಂದಲ)

ಶ್ರೀ ಬಂಡೆಪ್ಪ ಖಾಶಂಪೂರ್ :– ಮಾನ್ಯ ಅಧ್ಯಕ್ಷರೆ, ಯಾರಿಗೆ ಅವರು ಹೇಳುತ್ತಿದ್ದಾರೋ ಗೊತ್ತಾಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು :– ಉತ್ತರ ಹೇಳುವುದಕ್ಕೂ ಅವಕಾಶ ಕೊಡದಿದ್ದರೆ ಹೇಗೆ?

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ :– ನಮಗೆ ಪಾಠದ ಅಗತ್ಯವಿಲ್ಲ, ಉತ್ತರ ಕೊಡಿ.

(ಗೊಂದಲ)

ಅಧ್ಯಕ್ಷರು :– ದಯವಿಟ್ಟು ಕುಳಿತುಕೊಳ್ಳಿ

(ಗೊಂದಲ)

ಶ್ರೀ ಎ. ನಾರಾಯಣಸ್ವಾಮಿ :– 25–30 ಕಿ.ಮೀ. ಕಾಡಿನ ಹಾದಿಯೊಳಗೆ ಹೋಗಿದ್ದೇನೆ. ಸಣ್ಣ ನೀರು ಹರಿಯುತ್ತಿದ್ದರೆ ಗೋಣಿಚೀಲದೊಳಗೆ ಮನೆಗಳನ್ನು ಕಟ್ಟಿಕೊಂಡು ಜೀವನ ಮಾಡುತ್ತಿದ್ದಾರೆ. ಯಾರೂ ಆ ಕಡೆ ಹೋಗುತ್ತಿಲ್ಲ. ಯಾರಿಗೂ AC ಬಿಟ್ಟು ಆ ಕಡೆ ಹೋಗುವುದಕ್ಕೆ ಆಗುತ್ತಿಲ್ಲ. ಆದರೆ ಯಾರು ಓಡಾಟ ಮಾಡುತ್ತಾರೆ? ಯಾರು ಸ್ಪಂದಿಸಿ ಕೆಲಸ ಮಾಡಬೇಕಾಗಿದೆ? ನಾನು ಇವತ್ತು ಒಪ್ಪಿಕೊಳ್ಳುತ್ತೇನೆ ಒಂದೇ ಜಿಲ್ಲೆಗೆ ಒಂದೇ ತಾಲ್ಲುಕಿಗೆ ಕೊಡುವುದು ಅಪರಾಧ. ಇಡೀ ರಾಜ್ಯಕ್ಕೆ ಕೊಡಬೇಕು. ಆ ನಿಟ್ಟಿನಲ್ಲಿ ಸೂಚನೆ ಕೊಡುತ್ತೇನೆ. ಆದರೆ ಈಗಾಗಲೇ ಕೊರೆದಿರುವುದನ್ನು withdraw ಮಾಡಿ ಅನ್ಯಾಯ ಮಾಡುವಂತಹ ಅವಶ್ಯಕತೆ ಇಲ್ಲ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ :– ಬೋರ್‌ವೆಲ್ ಕೊರೆಯದೇ ಇರುವುದನ್ನು stop ಮಾಡುವುದಕ್ಕೆ ಹೇಳಿ.

(ಗೊಂದಲ)

ಶ್ರೀ ಎ. ನಾರಾಯಣಸ್ವಾಮಿ :– ಈಗಾಗಲೇ ಕೊರೆದಿರುವಂಥವುಗಳಿಗೆ withdraw ಮಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ :– ಬೋರ್‌ವೆಲ್ ಕೊರೆಯದೇ ಇರುವುದನ್ನು ಅಲ್ಲಿಗೇ ತಡೆಹಿಡಿಸಿ.

(ಗೊಂದಲ)

ಶ್ರೀ ಎ. ನಾರಾಯಣಸ್ವಾಮಿ :– ನಾಯಕರೆ ಮುಂದಿನ ದಿನಗಳಲ್ಲಿ ಆದನ್ನು ಸರಿ ಮಾಡುವ ನಿಟ್ಟಿನಲ್ಲಿ ನಾನು ಸೂಚನೆ ಕೊಡುತ್ತೇನೆ.

ಅಧ್ಯಕ್ಷರು :– ಆಯಿತು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :– ಈಗ ನೀರಿನ ಪರಿಹಾರ ಸಿಗಲಿಲ್ಲ. ಮಾನ್ಯ ಅಧ್ಯಕ್ಷರೆ ನಾವು ಸುಮ್ಮನೆ ಕೂರುವುದಕ್ಕೆ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು :– ಆಯಿತು, ಮಾನ್ಯ ಸೈಯದ್ ಯಾಸಿನ್‌ರವರು ಮಾತನಾಡುವುದು.

(ಗೊಂದಲ)

ಶ್ರೀ ಬಂಡೆಪ್ಪ ಖಾಶಂಪೂರ್ :– ಆ ಸಮಿತಿಯ ಅಧಿಕಾರ ಏನು ಸಾರ್?

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ :– ಸಮಿತಿಗೆ ಅಧಿಕಾರ ಇಲ್ಲದೆ ಹೋದರೆ...

(ಗೊಂದಲ)

ಅಧ್ಯಕ್ಷರು :– In future ನಲ್ಲಿ ಮಾಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ :– ಮಾನ್ಯ ಮುಖ್ಯಮಂತ್ರಿಗಳು ನಮ್ಮ ರಕ್ಷಣೆಗೆ ಬರಬೇಕು.

(ಗೊಂದಲ)

ಶ್ರೀ ಬಂಡೆಪ್ಪ ಖಾಶಂಪೂರ್ :– ಆ ಸಮಿತಿಯ ಅಧಿಕಾರ ಏನಿದೆ?

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ :– ತಡೆಹಿಡಿಯಬೇಕೆಂದು ಹೇಳಿ.

ಅಧ್ಯಕ್ಷರು :– ಈಗ ಸ್ಪಷ್ಟವಾಗಿ ಹೇಳಿದ್ದಾರೆ. ಇನ್ನು ಮುಂದೆ ಹೀಗೆ ಆಗದ ಹಾಗೇ ನೋಡಿಕೊಳ್ಳುತ್ತೇನೆಂದು ಹೇಳಿದ್ದಾರಲ್ಲಾ.

(ಗೊಂದಲ)

ಶ್ರೀ ಬಂಡೆಪ್ಪ ಖಾಶಂಪೂರ್ :– ಸಮಿತಿಯ ವಿಚಾರವನ್ನು ಅವರು ಪ್ರಸ್ತಾಪ ಮಾಡಿಲ್ಲ. ಮುಂದಕ್ಕೆ ಇದರ ಬಗ್ಗೆ ಪ್ರಸ್ತಾಪ ಮಾಡಿಲ್ಲ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ :– ಬೋರ್‌ವೆಲ್ ಆಗಿರುವುದನ್ನು ಬಿಡಿ. ಆಗಿಲ್ಲದಿರುವುದಕ್ಕೆ ತಡೆಹಿಡಿಬೇಕೆಂದು ಹೇಳಿ. ಮಾನ್ಯ ಸಚಿವರು ಹೇಳಲಿ.

(ಗೊಂದಲ)

ಶ್ರೀ ಎ. ನಾರಾಯಣಸ್ವಾಮಿ :– ಮಂಜೂರಾತಿ ಆಗಿರುವುದನ್ನು withdraw ಮಾಡುವುದಕ್ಕೆ ಆಗುವುದಿಲ್ಲ. ಫಲಾನುಭವಿಗಳಿಗೆ ಅವಕಾಶ ಮಾಡಿಕೊಟ್ಟಿರುವುದನ್ನು ತೆಗೆದು ಹಾಕುವುದಕ್ಕಾಗುವುದಿಲ್ಲ. ಉಳಿದವುಗಳು ಯಾವುದು ಆಗಿಲ್ಲ ಅದನ್ನು ಬೇಕಾದರೆ ನಾನು withdraw ಮಾಡುತ್ತೇನೆ.

ಅಧ್ಯಕ್ಷರು :– ಆಯಿತು. ಮಾನ್ಯ ಸೈಯದ್ ಯಾಸಿನ್‌ರವರು ಮಾತನಾಡುವುದು.

4. ವಿಷಯ : ರಾಯಚೂರು ಜಿಲ್ಲೆ, ತಾಲ್ಲೂಕು ಮತ್ತು ಹಳ್ಳಿಗಳಲ್ಲಿ ಕುಡಿಯುವ ನೀರಿನ ತೊಂದರೆ ಬಂದಿರುವ ಬಗ್ಗೆ.

ಶ್ರೀ ಸೈಯದ್ ಯಾಸೀನ್ (ರಾಯಚೂರು) :– ಮಾನ್ಯ ಅಧ್ಯಕ್ಷರೆ, ನಮ್ಮ ರಾಯಚೂರಿನಲ್ಲಿ ಮತ್ತು ನಮ್ಮ ಎಲ್ಲಾ district TLPC, ಎಲ್ಲಾ villages ಮತ್ತು ತಾಲ್ಲೂಕುಗಳಲ್ಲಿ ಬಹಳಷ್ಟು drinking water ಬಗ್ಗೆ ತ್ರಾಸಾಗಿದೆ. This is an immediate and urgent need. ಏಕೆಂದರೆ, Genekal reservoir in Devadurga taluk 50 ಕಿ.ಮೀ. from Raichur ಅಲ್ಲಿಂದ ನಮಗೆ drinking water ಅಲ್ಲಿ stock ಯಾವಾಗಲೂ every year ನಲ್ಲಿ before closing the TLPC. TLPC 31st ಗೆ close ಆಗುತ್ತಿದೆ Before that we have to fill up the stock for May, June and July. Upto June, July ನಮಗೆ ಬೇಕಾಗಿತ್ತು ಒಂದು Filling ಆಗಿದೆ. ಇನ್ನೂ ಎರಡೂ filling ಆಗಬೇಕು. ಆದ್ದರಿಂದ ಮಾನ್ಯ Irrigation Minister ರವರಲ್ಲಿ ಮತ್ತು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ನಮಗೆ ತ್ರಾಸಾಗಿದೆ. ಅದು ಬೇಕೇ ಬೇಕಾಗಿತ್ತು ಏಕೆಂದರೆ dam ನಲ್ಲಿ ಕೇವಲ 7 TMC ನೀರು ಇದೆ. 2 TMC ಯವರೆಗೂ safety stock ಗೆ ತೆಗೆದುಕೊಂಡು ಬರಬೇಕು. Even 5 TMC ನಲ್ಲಿ ಹೇಗೆ ಮಾಡುತ್ತಾರೆ ಎನ್ನುವುದು ಬೇಕಾಗಿತ್ತು. ಅದನ್ನು ತಮ್ಮ ಗಮನಕ್ಕೆ